

## ಶಾಕಿಣಿ-ಡಾಕಿಣಿಯರಿಗಿಂತ ಮೇಲು

ಖಳ ನಾಯಕಿಯರ ಬಗ್ಗೆ ಪದೇ ಪದೇ ಹೇಳುವುದೇ ಬೇಸರ ಅನ್ನಿಸಿದೆ. ಅಷ್ಟರ ಮಟ್ಟಿಗೆ ಕನ್ನಡದ ಧಾರಾವಾಹಿಗಳಲ್ಲಿ ಶಾಕಿಣಿ ಡಾಕಿಣಿಯರನ್ನು ಮೀರಿಸುವ ಕುತಂತ್ರ ಮಾಡುತ್ತಿದ್ದಾರೆ. ಸಣ್ಣ ಮಕ್ಕಳೂ ಭಯಂಕರ ವಿಲನ್ ಪಾತ್ರ ನಿರ್ವಹಿಸಿ ಗಾಬರಿ ಹುಟ್ಟಿಸುತ್ತಿದ್ದಾರೆ. ಸ್ಟಾರ್ ಸುವರ್ಣದ 'ನಮ್ಮ ಲಚ್ಚಿ' ತರ್ಕ ರಹಿತವಾಗಿದೆ.

ಇಲ್ಲಿ ಸಣ್ಣ ಹುಡುಗಿ ಮತ್ತೊಂದು ಹುಡುಗಿಗೆ ಹಾಡ ಬಾರದೆಂದು ಮಂಜುಗೆಡ್ಡೆಯನ್ನು (ಐಸ್ ಕ್ಯೂಬ್) ಬಲವಂತವಾಗಿ ತಿನ್ನಿಸುವ ದೃಶ್ಯವೇ ಅತ್ಯಂತ ಘನಘೋರ. ಇದು ಒಂದು ಸಣ್ಣ ಉದಾಹರಣೆ ಅಷ್ಟೆ, ಮಕ್ಕಳ ಮನಸ್ಸಿನ ಮೇಲೆ ಇಂತಹ ದರಿದ್ರ ಕೃತ್ಯಗಳು ಯಾವ ರೀತಿಯ ಪರಿಣಾಮ ಬೀರಬಹುದು. ಧಾರಾವಾಹಿಗಳ ಖಳನಾಯಕಿಯರ ಸಾಲಿಗೆ ಈಗ ಖಳ ಮಕ್ಕಳನ್ನೂ ಸೇರಿಸುತ್ತಿದ್ದಾರೆಯೇ? ಇದು ಕೇವಲ ಮನರಂಜನೆಯ ದೃಷ್ಟಿಯ ಕಾಲ್ಪನಿಕ ಕಥೆ ಎಂಬ ಹಣೆಬರಹ ಬೇರೆ ಕೇಡು!

—ಆರ್. ವೀರೇಶ್ ಕುಮಾರ್, ಬೆಂಗಳೂರು

ವಾರದ ಪತ್ರ

## ಯಾರದೀ ಕೈವಾಡ?

ಝೀ ಕನ್ನಡದ 'ಭೂಮಿಗೆ ಬಂದ ಭಗವಂತ' ಮಧ್ಯಮವರ್ಗದವರ ಪಡಿಪಾಟಲುಗಳನ್ನು ಮನಮುಟ್ಟುವಂತೆ ಬಿಂಬಿಸುತ್ತಿದೆ. ಇತ್ತೀಚೆಗೆ ಸ್ವಯಂಘೋಷಿತ ಕಪಾಲೇಶ್ವರ ಬಾಬಾನ ಮೋಸವನ್ನು ಬಯಲಿಗೆಳೆಯುವ ಪ್ರಸಂಗ ವಾಸ್ತವಕ್ಕೆ ತೀರ ಹತ್ತಿರವಾಗಿತ್ತು. ಮಗಳು ಮಾತು ಕಳೆದುಕೊಳ್ಳುವಲ್ಲಿ ಬಾಬಾನ ಕೈವಾಡವಿದೆ ಎಂದು ಗಿರಿಜಾ ತನ್ನ ಗಂಡನನ್ನು ನಂಬಿಸುತ್ತಾಳೆ. ಬೇರೆ ದಾರಿಯಿಲ್ಲದೆ ಶಿವಪ್ರಸಾದ ಡೋಂಗಿ ಬಾಬಾನ ಮೊರೆ ಹೋಗುತ್ತಾನೆ. ತನ್ನ ಕಣ್ಣೆದುರು ಮಗಳ ಮೇಲಿನ ದೈಹಿಕ ದೌರ್ಜನ್ಯವನ್ನು ಕಂಡು ಬಹಿರಂಗವಾಗಿ ಖಂಡಿಸುತ್ತಾನೆ. ಆಗ ಶೋಷಣೆಗೆ ಒಳಗಾದ ಬೇರೆ ಜನ ಬಾಬಾ ವಿರುದ್ಧ ತಿರುಗಿಬೀಳುತ್ತಾರೆ. ಅನ್ಯಾಯದ ವಿರುದ್ಧ ಧ್ವನಿ ಎತ್ತದಿದ್ದರೆ ಧ್ವನಿಯೇ ಉಡುಗಿ ಹೋಗುತ್ತದೆ ಎಂಬುದನ್ನು ಇದು ಸಂಕೇತಿಸುತ್ತದೆ. ಭಗವಂತ ಹೇಳಿದ 'ನಿನ್ನ ಮಗಳೇ ನಿನ್ನ ಧ್ವನಿ' ಎಂಬ ನುಡಿ ಶಿವಪ್ರಸಾದನ ಮಗಳಿಗೆ ಮಾತು ಬರುವ ಮೂಲಕ ಧ್ವನಿಪೂರ್ಣವಾಗುತ್ತದೆ.

ಆದರೆ ಹಿಂದಿನ ದಿನವಷ್ಟೇ ಭಗವಂತನಿಗೆ ಕಪಾಳಮೋಕ್ಷ ಮಾಡಲು ಹೋಗಿ ಕೈ ಸೊಟ್ಟಗಾಗಿದ್ದ ಕಪಾಲೇಶ್ವರ ಬಾಬಾನ ಕೈಯನ್ನು ಬಾಲಕಿಯ ಕೆನ್ನೆ ಸವರುವಷ್ಟು ನೆಟ್ಟಗೆ ಮಾಡುವಲ್ಲಿ ಯಾರ ಕೈವಾಡವಿದೆ ಎಂಬುದು ಮಾತ್ರ ಪ್ರಶ್ನೆಯಾಗಿಯೇ ಉಳಿಯುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ

## ಇಲ್ಲೂ ನೋಡಿ ಸ್ವಾಮಿ

ಝೀ ವಾಹಿನಿಯ 'ವೀಕೆಂಡ್ ವಿತ್ ರಮೇಶ್' ಚೆನ್ನಾಗಿ ಮೂಡಿಬರುತ್ತಿದೆ. ಹಿರಿಯ ನಟರಾದ ನೀರ್ನಳ್ಳಿ ರಾಮಕೃಷ್ಣ (ರಂಗನಾಯಕಿ), ಶ್ರೀನಿವಾಸ ಮೂರ್ತಿ, ಉಮೇಶ್, ಭವ್ಯಾ, ಜಯಮಾಲಾ, ತಾರಾ, ಹಿರಿಯ ನಿರ್ದೇಶಕರಾದ ಭಾರ್ಗವ, ರಾಜೇಂದ್ರಸಿಂಗ್, ಸಾಯಿಪ್ರಕಾಶ್, ಗಾಯಕಿ ಬಿ.ಕೆ. ಸುಮಿತ್ರಾ, ಮಂಜುಳಾ ಗುರುರಾಜ್, ಗುರುರಾಜ್ ಹೊಸಕೋಟೆ, ಕ್ರೀಡಾಕ್ಷೇತ್ರದಿಂದ ರಾಹುಲ್ ದ್ರಾವಿಡ್, ಶ್ರೀನಾಥ್, ಸಾಹಿತಿ ಎಸ್.ಎಲ್. ಭೈರಪ್ಪ, ವೈದೇಹಿ, ಡಾಕ್ಟರ್ ದೇವಿಪ್ರಸಾದ್ ಶೆಟ್ಟಿ, ಡಾ. ಬಿ.ಎಂ. ಹೆಗ್ಡೆ, ಡಾ. ಭುಜಂಗ ಶೆಟ್ಟಿ ಇನ್ನೂ ಅನೇಕ ಹಿರಿಯ ಸಾಧಕರು ನಮ್ಮ ನಡುವೆ ಇದ್ದಾರೆ. ಅವರನ್ನೂ ಪರಿಚಯಿಸಿ.

—ಶುಭಾ ದಿವಾಕರ್, ಬೆಂಗಳೂರು

## ತೊದಲು ನುಡಿಯ ಖುಷಿ

ಝೀ ಕನ್ನಡ ಟೀವಿಯಲ್ಲಿ 'ಥೋಟಾ ಚಾಂಪಿಯನ್' ಮಕ್ಕಳ ಆಟ ನೋಡಿ ಸಂತೋಷವಾಯಿತು. ಮಕ್ಕಳು ಏನೇ ಮಾಡಿದರು ನೋಡಲು ಆನಂದ ಅನ್ನಿಸುತ್ತದೆ. ಚಿಕ್ಕಮಕ್ಕಳಿಗೆ ಒಳ್ಳೆಯ ವೇದಿಕೆಯನ್ನು ಈ ಮೂಲಕ ನೀಡಿದ್ದಾರೆ. ಸ್ಪರ್ಧಿಗಳ ತೊದಲು ನುಡಿಗಳು ನಗುವನ್ನು ಉಕ್ಕಿ ಹರಿಸಿತು. ಹೀಗೇ ಇದು ಮುಂದುವರೆಯಲಿ. 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಆಡಿಷನ್ ಮಾಡುತ್ತಿದ್ದಾರೆ. ಅದಕ್ಕೂ ಒಳ್ಳೆಯ ಪ್ರತಿಭೆಗಳು ಬಂದು ಕಾರ್ಯಕ್ರಮ ಅಂದಗಟ್ಟಲಿ ಎಂಬುದು ನಮ್ಮ ಆಶಯ.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ



ನಿರೂಪಕ ಸೃಜನ್ ಲೋಕೇಶ್ ಅವರ ನೇತೃತ್ವದಲ್ಲಿ 'ಥೋಟಾ ಚಾಂಪಿಯನ್' ಮಕ್ಕಳ ರಿಯಾಲಿಟಿ ಶೋ 'ಝೀ'ಕನ್ನಡದಲ್ಲಿ ಪುನರಾರಂಭ ಆಗಿರುವುದು ಸಂತಸವಾಯಿತು. ಮೋಹಕ ನಗುವಿನ ಶ್ವೇತಾ ಚಂಗಪ್ಪ ಅವರ ಹಾಸ್ಯದ ಜೊತೆ ಕುರಿ ಪ್ರತಾಪ ಅವರ ನಿರೂಪಣೆಯಲ್ಲಿ ಸಮಯ ಕಳೆದು ಹೋಗಿದ್ದೇ ಗೊತ್ತಾಗುವುದಿಲ್ಲ. ಪುಟಾಣಿಗಳ ತೊದಲು ಮಾತು ಮನದುಂಬಿ ನಗುವನ್ನೇ ಮೂಡಿಸುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಸೂಪರ್ ಭಗವಂತ

ಝೀ ಕನ್ನಡದ 'ಭೂಮಿಗೆ ಬಂದ ಭಗವಂತ' ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಅದರಲ್ಲೂ ಭಕ್ತನ ಜೊತೆಯ ಸಂಭಾಷಣೆಯಂತೂ ನೋಡುಗರೆಲ್ಲರಿಗೂ ಸನ್ಮಾರ್ಗದಲ್ಲಿ ನಡೆಯುವಂತೆ ಉತ್ತೇಜನ ಕೊಡುವಂತಿದೆ. ಹಾಗೆಯೇ, ಭಗವಂತನ ದಿರಿಸು ವೀಕ್ಷಕರ ಗಮನವನ್ನು ಸೆಳೆಯುವಂತಿದೆ. ಭಗವಂತನ ಪಾತ್ರಧಾರಿಯ ಸೌಮ್ಯ ಅಭಿನಯವಂತೂ ಸೂಪರ್.

—ಶ್ಯಾಮಲಾ ಸತ್ಯ, ಬೆಂಗಳೂರು

## ಹೊಸತಿನ ಸೊಗಸು

ಕಲರ್ಸ್ ಕನ್ನಡದ 'ಅಂತರಪಟ' ವಿಭಿನ್ನ ಕಥಾಹಂದರದೊಂದಿಗೆ ಪ್ರಸಾರವಾಗುತ್ತಿದೆ. ಹೆಣ್ಣೊಬ್ಬಳು, ತನ್ನ ಹಾದಿಯಲ್ಲಿ ಬಂದ ಕಷ್ಟಗಳನ್ನು ಮೆಟ್ಟಿನಿಂತು ಬದುಕಿನಲ್ಲಿ ಮೇಲೆ ಬರಬೇಕೆಂದು ಧೈರ್ಯದೊಂದಿಗೆ ಮುನ್ನುಗ್ಗುವ ಧಾರಾವಾಹಿಯ ಆಶಯ ಸ್ಫೂರ್ತಿದಾಯಕವಾಗಿದೆ.

—ಸುಮಾ ಮಂಡ್ಯ